**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**
**ಸಿ.ಸಿ ಸಂಖ್ಯೆ 267/2024**

ಫಿರ್ಯಾದಿಃ ಕುಶ ತಿಮ್ಮಯ್ಯ ಹೆಗಡೆ
ಸಾಕೀನಃ ದುರ್ಗಾಕೇರಿ ರಾಮೇಶ್ವರ ದೇವಸ್ಥಾನ,
ತಾಲೂಕುಃ ಹೊನ್ನಾವರ

**-ವಿರುದ್ಧ-**

ಆರೋಪಿ ಶ್ರೀರಾಮ ನಾಗೇಶ ಭಟ್ಟ
ಪುರೋಹಿತರು,
ಸಾಕೀನಃ ಬೆಳ್ಳಿಮಕ್ಕಿ, ಪೋಃ ಗೇರುಸೊಪ್ಪ,
ತಾಲೂಕುಃ ಹೊನ್ನಾವರ

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ಅಡಿಯಲ್ಲಿ ದಾಖಲು ಮಾಡಿಕೊಂಡ ಆರೋಪಿಯ ಹೇಳಿಕೆ**

ಪ್ರಶ್ನೆ 1: ನೀವು ಪಿರ್ಯಾದಿಯವರ ಪರವಾಗಿ ಫ್ರಾಸಾ-1 ರವರ ಹೇಳಿಕೆಯನ್ನು ಕೇಳಿದ್ದೀರಾ?
ಉತ್ತರಃ

ಪ್ರಶ್ನೆ2: ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯು ತನಗೆ ತೀರಾ ಪರಿಚಯಸ್ಥನಿಂದು, ಆರೋಪಿಯು ತನ್ನಿಂದ ರೂ.6,50,000/-ಗಳನ್ನು ಕೈಗಡ ಸಾಲವಾಗಿ ಪಡೆದುಕೊಂಡಿದ್ದು, ತಾನು ಆರೋಪಿಗೆ ಸಾಲವನ್ನು ಮರುಪಾವತಿಸುವಂತೆ ಕೇಳಿದಾಗ ದಿನಾಂಕಃ 01-09-2022 ರಂದು ಆರೋಪಿಯು ಸಾಲ ಮರುಪಾವತಿಗಾಗಿ ತನ್ನ ಖಾತೆ ಹೊಂದಿರುವ ದಿ ಕೆನರಾ ಬ್ಯಾಂಕ್, ಗೇರುಸೊಪ್ಪಾ ಶಾಖೆಯ ಚೆಕ್ ನಂ.195951 ನಂಬರಿನ ಚೆಕ್ಕನ್ನು ಸಹಿ ಮಾಡಿ ತನಗೆ ನೀಡಿ ಸಾಲದ ಮೊಬಲಗನ್ನು ಪಡೆದುಕೊಳ್ಳುವಂತೆ ತಿಳಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?
ಉತ್ತರಃ

ಪ್ರಶ್ನೆ2: ಫ್ರಾಸಾ-1 ರವರು ಮುಂದುವರಿದು, ತಾನು ಆರೋಪಿಯು ನೀಡಿದ ಚೆಕ್ಕನ್ನು ನಗದೀಕರಣಕ್ಕಾಗಿ ಕೆನರಾ ಬ್ಯಾಂಕ್, ಹೊನ್ನಾವರ ಶಾಖೆಯಲ್ಲಿ ಹಾಜರುಪಡಿಸಿದಾಗ, ಸದ್ರಿ ಚೆಕ್ ನಗದೀಕರಣಗೊಳ್ಳದೇ "ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂದು ಬ್ಯಾಂಕಿನ ಅಧಿಕಾರಿಗಳು ಹಿಂಬರಹವನ್ನು ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?
ಉತ್ತರಃ

ಪ್ರಶ್ನೆ.3: ಫ್ರಾಸಾ-1 ರವರು ಮುಂದುವರಿದು, ನಂತರ ಆರೋಪಿಗೆ ತಾನು ತಮ್ಮ ವಕೀಲರ ಮೂಲಕ ದಿನಾಂಕಃ 02-09-2022 ರಂದು ಈ ಬಗ್ಗೆ ತಾನು ರಜಿಸ್ಟರ್ಡ ನೋಟಿಸ್ ಕಳುಹಿಸಿದ್ದು, ಸದರಿ ನೋಟೀಸು ನಿಮಗೆ ದಿನಾಂಕಃ 03-09-2022 ರಂದು ಜಾರಿಯಾಗಿದ್ದು, ಇದುವರೆಗೂ ಹಣ ಪಾವತಿ ಮಾಡಿಲ್ಲ ಎಂಬುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?
ಉತ್ತರಃ

ಪ್ರಶ್ನೆ.4: ಫ್ರಾಸಾ-1 ರವರು ಮುಂದುವರಿದು, ಆರೋಪಿಯು ಸದರಿ ಅವಧಿಯೊಳಗೆ ಹಣವನ್ನು ಮರು ಪಾವತಿಸದೇ ತನ್ನ ಖಾತೆಯಲ್ಲಿ ಹಣ ಇಲ್ಲದೇ ಇದ್ದರೂ ಸಹ ಉದ್ದೇಶಪೂರಕವಾಗಿ ತನಗೆ ವಂಚನೆ ಮಾಡುವ ಉದ್ದೇಶದಿಂದಲೇ ನಗದೀಕರಣವಾಗದ ಚೆಕ್ಕನ್ನು ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?
ಉತ್ತರಃ

ಪ್ರಶ್ನೆ.5: ನಿಮಗೆ ಇನ್ನೇನಾದರೂ ಹೇಳುವುದು ಇದೆಯೇ?
ಉತ್ತರಃ

ಪ್ರಶ್ನೆಃ.6: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲಾತಿ ಸಾಕ್ಷ್ಯ ಇರುತ್ತದೆಯೇ?
ಉತ್ತರಃ

(ಮೇಲೆ ಹೇಳಿದ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಆರೋಪಿಗೆ ಓದಿ ಹೇಳಿದ್ದು, ಅವರು ನೀಡಿದ ಉತ್ತರವನ್ನು ನನ್ನ ಹಸ್ತಾಕ್ಷರಗಳಿಂದ ಬರೆದು ಕೊಳ್ಳಲಾಯಿತು ಅಂತಾ ಈ ಮೂಲಕ ದೃಡೀಕರಿಸುತ್ತೇನೆ.)

Sd/-

**ದಿನಾಂಕಃ 29-07-2025.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**